INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -5, September-October, 2025
PageNo,13-20
Peer -Reviewed, Refereed Journal

# ಅಶ್ವತ್ಥರು ಚಿತ್ರಿಸಿದ 'ಬಲಿ' ಚಕ್ರವರ್ತಿ

*.ಚೈತ್ರ ಎಸ್.[1]
**.ಪ್ರೊ.ವಿಜಯಕುಮಾರಿ ಎಸ್.ಕರಿಕಲ್.[2]

ಚಿಕ್ಕಮಗಳೂರಿನ ಒಂದು ಪುಟ್ಟ ಗ್ರಾಮ ಕೂದುವಳ್ಳಿ. ಅಶ್ವತ್ಥರು ಸೋಮಯ್ಯ ಮತ್ತು ಲಕ್ಷ್ಮಮ್ಮ ದಂಪತಿಗಳ ಪುತ್ರರಾಗಿ 18-06-1912 ರಂದು ಚಾಮರಾಜನಗರದಲ್ಲಿ ಜನಿಸಿದರು. ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡ ಅಶ್ವತ್ಥರು ಬೆಳೆದದ್ದು ದೊಡ್ಡಪ್ಪ ಮತ್ತು ದೊಡ್ಡಮ್ಮನವರ ಆಶ್ರಯದಲ್ಲಿ. 1934ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಇ(ಸಿವಿಲ್) ಇಂಜಿನಿಯರಿಂಗ್ ಪದವಿ ಪಡೆದರು. 1935ರಲ್ಲಿ ತಮ್ಮ ಸಂಬಂಧಿಗಳ ಮಗಳೇ ಆದ ಲಲಿತಮ್ಮನವರನ್ನು ವಿವಾಹವಾದರು. ಅಶ್ವತ್ಥರು ವೃತ್ತಿ ಜೀವನದ ಆರಂಭದಲ್ಲಿ ಇಂಜಿನಿಯರ್ ಆಗಿ ಹಲವು ಕಡೆ ಕಾರ್ಯ ನಿರ್ವಹಿಸಿದರು. ನಂತರ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಈ ಕೆಲಸಗಳ ನಡುವೆಯೇ ಅವರ ಸಾಹಿತ್ಯ ಬರವಣಿಗೆಯೂ ನಡೆಯುತ್ತಿತ್ತು. ಅಶ್ವತ್ಥರಿಗೆ ಸಾಹಿತ್ಯ ಬರವಣಿಗೆಯ ಆಸಕ್ತಿ ಹೆಚ್ಚಾದಂತೆ ಪ್ರಾಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡಿ ಸಂಪೂರ್ಣವಾಗಿ ಸಾಹಿತ್ಯ ರಚನೆ ಮಾಡಲು ಮುಂದಾದರು.

ನವೋದಯ ಸಾಹಿತ್ಯದ ಪ್ರಮುಖ ಲೇಖಕರಲ್ಲಿ ಒಬ್ಬರಾದ ಕೂದುವಳ್ಳಿ ಅಶ್ವತ್ಥ ನಾರಾಯಣರಾವ್ ಸಾಹಿತ್ಯ ಲೋಕದಲ್ಲಿ 'ಅಶ್ವತ್ಥ' ಎಂದೇ ಖ್ಯಾತ ನಾಮರಾಗಿದ್ದಾರೆ. ಕತೆ, ಕಾದಂಬರಿ, ನಾಟಕ, ಪ್ರಬಂಧ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಇವರ ಮುನಿಯನ ಮಾದರಿ, ರಂಗನಾಯಕಿ, ಮರ್ಯಾದೆ ಮಹಲು ಕಾದಂಬರಿಗಳು ಚಲನಚಿತ್ರಗಳಾಗಿ ಯಶಸ್ಸನ್ನು ಕಂಡಿವೆ. ಅಲ್ಲದೇ ಇವರು ಸು.179 ಕತೆಗಳನ್ನು ರಚಿಸಿದ್ದು ಕಥಾ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರವಾದುದಾಗಿದೆ.

ಕನ್ನಡ ಸಾಹಿತ್ಯದಲ್ಲಿ ಕಥೆಗಾರರೆಂದೇ ಖ್ಯಾತರಾದ ಅಶ್ವತ್ಥರು ನಾಟಕ ಪ್ರಕಾರದಲ್ಲಿಯೂ ಕೃತಿಗಳನ್ನು ಹೊರತಂದಿದ್ದಾರೆ. ಅವುಗಳು ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ವಸ್ತುಗಳನ್ನು ಆಧರಿಸಿ ರಚನೆಗೊಂಡವುಗಳಾಗಿವೆ. ಭಾರತೀಯ ಸಾಹಿತ್ಯ ಪರಂಪರೆಗಳಲ್ಲಿ ಒಂದಾಗಿರುವ ನಾಟಕವು

[1].ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸಗಂಗೋತ್ರಿ ಮೈಸೂರು
[2] .ಪ್ರಾಧ್ಯಾಪಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಪುರಾಣಗಳಿಂದಲೇ ಪ್ರೇರಣೆಯನ್ನು ಪಡೆದುಕೊಂಡಿವೆ. ಹೊಸಗನ್ನಡದ ಆರಂಭದಲ್ಲಿ ಕಂಡುಬರುವ ಪೌರಾಣಿಕ ನಾಟಕಗಳು ಭಾಷಾಂತರಗಳ ಮೂಲಕ ಬಂದವುಗಳಾಗಿವೆ. ರಾಮಾಯಣ, ಮಹಾಭಾರತ, ಬೃಹತ್ಕಥೆಗಳು ನಾಟಕದ ವಸ್ತುಗಳಿಗೆ ಉಗಮ ಸ್ಥಾನಗಳಾಗಿವೆ. ಅಲ್ಲದೇ ಹದಿನೆಂಟು ಪುರಾಣಗಳು, ಉಪಪುರಾಣಗಳು ಅವುಗಳ ಸಾಲಿಗೆ ಸೇರುತ್ತವೆ. ಅಲ್ಲದೇ ಕಲ್ಪಿತ ಕಥೆಗಳು ಸೇರಿ ಅವುಗಳ ರೂಪುರೇಖೆಗಳನ್ನು ಪೌರಾಣಿಕ ಕಥಾವಸ್ತುವಿನೊಂದಿಗೆ ಸಾಮ್ಯತೆಯನ್ನು ಪಡೆದುಕೊಂಡಿವೆ.

"ಜಗತ್ತಿನ ಎಲ್ಲಾ ಭಾಷೆಯ ಪುರಾಣಗಳು ಮಾನವ ಇತಿಹಾಸದ ಗಣಿಗಳಿದ್ದಂತೆ. ಪಾತ್ರಗಳು, ಘಟನೆಗಳು, ಸಂಕೇತಗಳು, ಪ್ರತಿಮೆಗಳು ಮಾನವನ ಮನೋವ್ಯಾಪಾರದ ಪ್ರತೀಕಗಳಾಗಿ ವಿಜೃಂಭಿಸುತ್ತವೆ."[1] ಆಧುನಿಕ ಕೃತಿಕಾರರಲ್ಲಿ ಅದರಲ್ಲೂ ಮುಖ್ಯವಾಗಿ ನವೋದಯ, ನವ್ಯ ಲೇಖಕರು ತಮ್ಮ ಮಹಾಕಾವ್ಯ, ಕಾದಂಬರಿ, ನಾಟಕ ರಚನೆಗೆ ಪುರಾಣ ಮತ್ತು ಐತಿಹಾಸಿಕ ವಸ್ತುಗಳು ಪೂರಕವಾಗಿಯೇ ಇದ್ದವು. ಸಾಮಾಜಿಕತೆ, ರಾಷ್ಟ್ರೀಯತೆ, ಮಾನವೀಯತೆ, ಧರ್ಮ, ದೇಶ, ಭಾಷೆ, ಆಧ್ಯಾತ್ಮ, ಪ್ರಕೃತಿ ಮೊದಲಾದ ಅಂಶಗಳು ಸಾಹಿತ್ಯ ರಚನೆಗೆ ಒಂದು ವಿಸ್ತೃತ ಆಯಾಮವನ್ನು ರಚಿಸಿಕೊಟ್ಟವು. ಕುವೆಂಪು, ಮಾಸ್ತಿ, ಪು.ತಿ.ನ, ಬಿ.ಎಂ.ಶ್ರೀ, ಗಿರೀಶ್ ಕಾರ್ನಾಡ್, ಲಂಕೇಶ್, ಚಂದ್ರಶೇಖರ ಕಂಬಾರ ಇನ್ನು ಮುಂತಾದವರು ತಮ್ಮ ಕೃತಿಗಳ ರಚನೆಯ ಮೂಲಕ ಪೌರಾಣಿಕ ,ಐತಿಹಾಸಿಕ ವಸ್ತುಗಳನ್ನು ವಾಸ್ತವಿಕ ಮೌಲ್ಯಗಳನ್ನು ತಮ್ಮ ಕೃತಿಗಳಲ್ಲಿ ರಚಿಸಿದ್ದಾರೆ. ರಾಮಾಯಣ, ಮಹಾಭಾರತ, ಭಾಗವತ, ವೀರಶೈವ, ವೈದಿಕ, ಜೈನ ಪುರಾಣಗಳನ್ನು ಆಧರಿಸಿ ಕಾವ್ಯ, ನಾಟಕ ಕೃತಿಗಳನ್ನು ರಚಿಸಿ ಪುರಾಣವನ್ನು ಸಮಕಾಲೀನಗೊಳಿಸುವ ಪ್ರಯತ್ನ ಮಾಡಿದ್ದಾರೆ.

ಪುರಾಣವನ್ನು ಆಧರಿಸಿ ಅಶ್ವತ್ಥರು 'ಬಲಿ' ಎಂಬ ಪೌರಾಣಿಕ ನಾಟಕವನ್ನು ರಚಿಸಿದ್ದಾರೆ. ವಿಷ್ಣುವಿನ ದಶಾವತಾರಗಳಲ್ಲಿ ಒಂದಾದ ವಾಮನ ಅವತಾರದ ಕಥೆ ಇದಕ್ಕೆ ಮೂಲ. ಪುರಾಣದ ಕಥೆಯಲ್ಲಿ ಬಲಿ ಚಕ್ರವರ್ತಿಯು ವಿಶ್ವಜಿತ್ತೆಂಬ ಯಾಗವನ್ನು ಮಾಡಿ ಅತ್ಯುಗ್ರ ಶಕ್ತಿಯನ್ನು ಸಂಪಾದಿಸಿ ಇಂದ್ರಾದಿ ದೇವತೆಗಳನ್ನು ಸೋಲಿಸಿ ತ್ರಿಲೋಕಾಧಿಪತಿಯಾದನು. ಆಗ ದೇವತೆಗಳ ಕೋರಿಕೆಯಂತೆ ಶ್ರೀ ಹರಿಯು ವಾಮನನೆಂಬ ಹೆಸರಿನಲ್ಲಿ ಕಶ್ಯಪ ಅದಿತಿಯರ ಪುತ್ರನಾಗಿ ಜನಿಸಿದನು. ತೀರಾ ಚಿಕ್ಕದಾದ ಆಕೃತಿಯನ್ನು ಹೊಂದಿದ್ದರಿಂದ ಅವನಿಗೆ ವಾಮನ ಎಂದು ಹೆಸರಾಯಿತು. ಈ ಸಂದರ್ಭದಲ್ಲಿ ಬಲಿಯು ಅಶ್ವಮೇಧ ಯಾಗವನ್ನು ಮಾಡುತ್ತಿದ್ದನು. ಆಗ ವಾಮನನು ಯಾಗಶಾಲೆಯನ್ನು ಪ್ರವೇಶಿಸಿದಾಗ, ಬಾಲವಟುವಿನ ಅದ್ಭುತ ತೇಜಸ್ಸಿನಿಂದ ಬಲಿಯಾದಿಯಾಗಿ ಎಲ್ಲರೂ ಬೆರಗಾದರು. 'ನಿನಗೆ ಯಾವ ವರ ಬೇಕೋ ಕೇಳು' ಎಂದು ಬಲಿಯು ಹೇಳಿದಾಗ ವಾಮನನು 'ಚಕ್ರವರ್ತಿ ನನಗೆ ಹೆಚ್ಚೇನೂ ಬೇಡ, ನನ್ನ ಅಳತೆಯಲ್ಲಿ ಮೂರು ಹೆಜ್ಜೆ ಭೂಮಿ ಕೊಟ್ಟರೆ ಸಾಕು' ಎಂದನು. ಇಷ್ಟೊತ್ತಿಗಾಗಲೇ ಶುಕ್ರನಿಗೆ ವಾಮನನು ಮಹಾವಿಷ್ಣುವೆಂದು ತಿಳಿದು ಹೋಗಿ, ಬಲಿಗೆ ಪರಿಪರಿಯಾಗಿ ಹೇಳಿದರೂ ಅವನು ತನ್ನ ನಿರ್ಧಾರವನ್ನು

ಬದಲಿಸಲಿಲ್ಲ. ಬಲಿಯಿಂದ ವರ ಪಡೆದ ವಾಮನನು ನೋಡ ನೋಡುತ್ತಿದ್ದಂತೆಯೇ ತ್ರಿವಿಕ್ರಮನಾಗಿ ಬೆಳೆದನು. ಆಕಾಶ ಭೂಮಿಗಳು ಒಂದಾದವು. ಒಂದು ಪಾದದಿಂದ ಇಡೀ ಭೂಮಂಡಲವನ್ನು ಅಳೆದನು. ಇನ್ನೊಂದು ಪಾದವನ್ನು ಗಗನಕ್ಕೆ ಚಾಚಿದಾಗ ಅವನ ಅಂಗುಷ್ಠದ ಉಗುರಿನಿಂದ ಬ್ರಹ್ಮಾಂಡ ಬಿತ್ತಿಯಲ್ಲಿ ರಂಧ್ರವಾಗಿ ದೇವ ಗಂಗೆಯು ಹೊರಬಂದಳು. ಶ್ರೀ ಹರಿಯು ಮತ್ತೊಂದು ಪಾದವನ್ನು ಬಲಿಯ ತಲೆಯ ಮೇಲಿಟ್ಟಾಗ ಪ್ರಹ್ಲಾದ ಪ್ರಕಟಗೊಂಡು ಬಲಿಯನ್ನು ರಕ್ಷಿಸುವಂತೆ ಪ್ರಾರ್ಥಿಸಿದನು. ಆಗ ಶ್ರೀ ಹರಿಯು– 'ಪಾತಾಳದಲ್ಲಿರುವ ಇವನ ಅರಮನೆಯನ್ನು ನಾನು ನನ್ನ ಒಂದಂಶದಿಂದ ಯಾವಗಲೂ ಕಾಯುತ್ತಾ ಇರುತ್ತೇನೆ. ಅಲ್ಲದೇ ಮುಂದಿನ ಮನ್ವಂತರದಲ್ಲಿ ಇವನು ಇಂದ್ರನಾಗುತ್ತಾನೆ. ಪ್ರತಿ ವರ್ಷ ಇವನು ತನ್ನ ರಾಜ್ಯವನ್ನು ನೋಡಲು ಭೂಮಿಗೆ ಬರುತ್ತಾನೆ ಮತ್ತು ಆಗ ಜನರು ದೀಪಾವಳಿ ಹಬ್ಬವನ್ನು ಆಚರಿಸುತ್ತಾರೆ' ಎಂಬುದಾಗಿ ಅನುಗ್ರಹಿಸಿದನು. ಇದು ಪುರಾಣದ ಮೂಲ ಕಥೆಯಾಗಿದ್ದು ಕಥಾ ವಿನ್ಯಾಸದಲ್ಲಿ ಬದಲಾವಣೆಯನ್ನು ಅಶ್ವತ್ಥರು ಮಾಡಿಕೊಂಡಿದ್ದಾರೆ.

ಬಲಿ ನಾಟಕವು ಮೂರು ದೃಶ್ಯಗಳುಳ್ಳ ಏಕಾಂಕ ನಾಟಕವಾಗಿದೆ. ನಾಟಕದ ಆರಂಭಕ್ಕೆ ದೇವೇಂದ್ರನ ಅಮರಾವತಿಯಲ್ಲಿ ಬಲಿರಾಜನ ಕಡೆಯ ಯೋಧರ ಪಡೆಯೊಂದು ಜಯಗೀತೆಯನ್ನು ಹಾಡುತ್ತಾ ಬರುತ್ತಾರೆ.

"ನಮ್ಮ ಮೇಲೆರಗುವವರ,
ನೆರವವರಿಗಾಗುವರ,
ನಮ್ಮನರಿಯದೆ ಜರೆವ ವೈರಿ ಜನರ
ಮೋಸ ದರ್ಪವ ಮುರಿದು ಸಂಸ್ಕೃತಿಯ ಕಲಿಸುವೆವು!
ಬಾಳ್ಗೆ ಬಲಿ ರಾಜೇಂದ್ರ!
ಧರ್ಮ ಪ್ರಭು ವೀರೇಂದ್ರ!"[2]

ದೇವೇಂದ್ರ, ಅಗ್ನಿ, ವಾಯು, ಯಮ, ಕುಬೇರ ಹಾಗೂ ಆರ್ಯಾದಿತ್ಯ ರಾಜ ಮತ್ತು ಆತನ ಅನುಯಾಯಿಗಳೊಡನೆ ಬಲಿರಾಜ ಯುದ್ಧ ಮಾಡಿ ಅವರನ್ನು ಪರಾಜಿತರನ್ನಾಗಿಸಿದ್ದಾನೆ. ಕಲ್ಪವೃಕ್ಷದ ಬಳಿ ಈಗ ಸೋತು ಬಂಧಿಗಳಾಗಿರುವ ಇಂದ್ರಾದಿ ದೇವತೆಗಳ ವಿಚಾರಣೆಗಾಗಿ ಸುರರ ಕಡೆಯ ಯೋಧರು ಮತ್ತು ಅಸುರರ ಕಡೆಯ ಯೋಧರು ಹೋಗುತ್ತಿದ್ದಾರೆ. ಮೊದಲ ದೃಶ್ಯದಲ್ಲೇ ಬಲಿ ಚಕ್ರವರ್ತಿ ಎಂತಹ ಶ್ರೇಷ್ಠ ಗುಣವುಳ್ಳವನು ಎಂಬುದನ್ನು ಅವನ ಅಸುರ ಯೋಧರ ಮಾತುಗಳಿಂದ ತಿಳಿಯಬಹುದು. " ನಮ್ಮ ಚಕ್ರವರ್ತಿ ತನ್ನ ಸಾಮ್ರಾಜ್ಯದಲ್ಲೇ ಅರಮನೆ, ಆಸ್ಥಾನ, ಸಿಂಹಾಸನ ಪದವಿ ಪ್ರದರ್ಶನ, ದುರ್ಬಲಗೊಳಿಸುವ ಸುಖಲೋಲುಪತೆ ದುರ್ವ್ಯಸನಗಳು ಇವನ್ನು ಕಂಡವನೇ ಅಲ್ಲ."[3] ಎನ್ನುವ ಅಸುರ ಯೋಧನ ಮಾತುಗಳಲ್ಲಿ ಬಲಿಯು ದಾನವನಾದರು ಅಹಂಕಾರ, ಅಧಿಕಾರ ದರ್ಪಗಳಿಂದ

ನಡೆದುಕೊಳ್ಳುವವನಲ್ಲ ಆತ ಪ್ರಜಾರಾಜ ಹಾಗೂ ಪ್ರಜಾಸೇವಕ ಎಂಬುದನ್ನು ನಾಟಕಕಾರರು ಯೋಧರ ಸಂಭಾಷಣೆಯ ಮೂಲಕ ತಿಳಿಸುತ್ತಿದ್ದಾರೆ. ಅಲ್ಲದೇ ಅಸುರರ ಕುರಿತು ಸುರರಿಗೂ ಹಾಗೂ ಮಾನವರಿಗೂ ಇರುವ ಅನೇಕ ತಪ್ಪು ಕಲ್ಪನೆಗಳನ್ನು ದೂರವಾಗಿಸುವ ಪ್ರಯತ್ನವನ್ನು ಇಡೀ ನಾಟಕದುದ್ದಕ್ಕೂ ಕಾಣಬಹುದಾಗಿದೆ.

ದೃಶ್ಯ ಎರಡರಲ್ಲಿ ಅಮರಾವತಿಯ ಸೆರೆಮನೆಯಲ್ಲಿರುವ ಇಂದ್ರಾದಿ ದೇವತೆಗಳು ತಮಗೆ ಒದಗಿರುವ ದುಸ್ಥಿತಿಯನ್ನು ಕುರಿತು ಮಾತಾನಾಡಿಕೊಳ್ಳುತ್ತಿದ್ದಾರೆ. ಮಾನವ ಜೀವನಕ್ಕೆ ಅಗತ್ಯವಾದ ಆಹಾರ, ನಿದ್ದೆ, ನೀರು, ಗಾಳಿ ಇತ್ಯಾದಿಗಳು ದೇವತೆಗಳಾದವರಿಗೂ ಮುಖ್ಯವೇ ಎಂಬುದು ಅವರ ಮಾತುಗಳಿಂದಲೇ ತಿಳಿದು ಬರುತ್ತದೆ. "...ಇನ್ನಷ್ಟು ಕಾಲ ಹೀಗೆಯೇ ಕಳೆದರೆ ನಾವು ಅಮರರೆನಿಸಿಕೊಂಡವರೂ ಕೂಡ ಮರಣ ಹೊಂದುವುದರಲ್ಲಿ ಸಂದೇಹವೇ ಇಲ್ಲ"[4] ಎಂಬ ಸುರರಾಜನ ಮಾತುಗಳಿಂದ ಮರಣವೆನ್ನುವುದು ದೇವತೆಗಳಿಗೂ ಒಂದೇ, ಅವರು ಅಮೃತ ಪಾನ ಮಾಡಿ ಅಮರರೆನಿಸಿಕೊಂಡ ಮಾತ್ರಕ್ಕೆ ಆಹಾರ, ನೀರು, ನಿದ್ರೆಗಳಿಲ್ಲದೇ ಹೋದರೆ ಮರಣ ಖಚಿತ ಎಂಬುದನ್ನು ತಿಳಿಸುತ್ತಾರೆ. ಶಕ್ತಿವಂತರಾದರೂ ಬಲಿಯನ್ನು ಗೆಲ್ಲಲು ಸಾಧ್ಯವಾಗದೇ ಹೋಗಲು ಕಾರಣವೇನು ಎಂದು ಚರ್ಚಿಸುತ್ತಿರುವಾಗ ಯಮಧರ್ಮನೂ ಬಲಿರಾಜನ ಅಪ್ರತಿಮ ಶಕ್ತಿಯ ರಹಸ್ಯದ ಒಂದು ಅಂಶ ಅವನ ಧರ್ಮವೂ ಆಗಿರಬೇಕೆಂದೆನ್ನುತ್ತಾನೆ. ಆದರೆ ಆರ್ಯರಾಜನ ದೃಷ್ಟಿಯಲ್ಲಿ ಧರ್ಮಿಷ್ಠನೆಂದರೆ, ಸಾವಿರಾರು ಯಜ್ಞಯಾಗಗಳನ್ನು, ಪೂಜೆ ವ್ರತ ಹೋಮಗಳನ್ನು, ಋಷಿ ಬ್ರಾಹ್ಮಣಾದಿಗಳಿಗೆ ಆದಷ್ಟು ಗೋದಾನ ಭೂದಾನ ಸುವರ್ಣದಾನ ಅನ್ನದಾನ ವಸ್ತ್ರದಾನಗಳನ್ನು ಮಾಡುವ ತಾವುಗಳು ಧರ್ಮಿಷ್ಠರು. ಯಾವ ಪೂಜೆಗಳನ್ನು ಮಾಡದ ಬಲಿಯಲ್ಲ ಎಂಬುದು ಆತನ ವಾದ. ಬಲಿ ಚಕ್ರವರ್ತಿ ದಾನಶೂರನೂ, ಧರ್ಮಿಷ್ಠನೂ ಆಗಿರುವನು. ಆರ್ಯರಾಜ ಹೇಳುವಂತೆ ಕೇವಲ ಯಜ್ಞ ಯಾಗ, ಪೂಜೆ, ವ್ರತ ಹೋಮಗಳನ್ನು ಮಾಡಿದರಷ್ಟೇ ಧರ್ಮ ಮಾರ್ಗದಲ್ಲಿ ನಡೆದುಕೊಂಡತ್ತಾಗುವುದಿಲ್ಲ. ಬಲಿರಾಜನ ಕಡೆಯ ಭಟರು ನೀಡಿದ ಆಹಾರಗಳನ್ನು ಮೊದಲಿಗೆ ನಿಕೃಷ್ಠವೆಂದು ಹೀಗಳೆದರೂ ಕಡೆಗೆ ಅನ್ಯ ದಾರಿಯಿಲ್ಲದೇ ಸೇವಿಸುತ್ತಾರೆ. ಆಹಾರ ಪದ್ಧತಿ ಒಬ್ಬೊಬ್ಬರಲ್ಲಿ ಒಂದೊಂದು ಬಗೆಯಾಗಿರುತ್ತದೆ. ಜಗತ್ತಿನಲ್ಲಿ ಯಾವ ಆಹಾರವನ್ನು ಶ್ರೇಷ್ಠ ಅಥವಾ ಕನಿಷ್ಠ ಎಂದು ಹೇಳಲಾಗದು. ಪ್ರತಿಯೊಬ್ಬ ವ್ಯಕ್ತಿ ಅಥವಾ ಸಮಾಜಕ್ಕೆ ತನ್ನದೇ ಆದ ಆಹಾರ ಪದ್ಧತಿ, ಸಂಪ್ರದಾಯ, ಆಚರಣೆ, ಉಡುಗೆ ತೊಡುಗೆಗಳ ಸಂಸ್ಕೃತಿ ಇದ್ದೇ ಇರುತ್ತದೆ. ಅದರಲ್ಲಿ ಯಾವುದು ಶ್ರೇಷ್ಠ ಅಥವಾ ಕನಿಷ್ಠ ಎನಿಸಿಕೊಳ್ಳಲಾಗದು. ಅವರವರ ಅನುಕೂಲಕ್ಕೆ ವಾತವರಣದಲ್ಲಿ ದೊರಕುವ ಪದಾರ್ಥಗಳಿಗೆ ಅನುಗುಣವಾಗಿ ಆಹಾರ ಪದ್ಧತಿ ರೂಢಿಯಲ್ಲಿ ಬಂದಿರುತ್ತದೆಯಷ್ಟೇ.

ಆರ್ಯರಾಜನು ಅಕ್ರಮ ರಾಜ್ಯ ವಿಸ್ತರಣಾ ನೀತಿಯನ್ನು ಅನುಸರಿಸಿದ್ದೇ ಈ ಯುದ್ಧಕ್ಕೆ ಕಾರಣ. ಅಸುರರ ಮೇಲೆ ಆಕ್ರಮಣ ಮಾಡಿ ಅವರನ್ನು ವಶಪಡಿಸಿಕೊಂಡು ಅನಾಗರೀಕರಾದ ಅವರನ್ನು ತಿದ್ದಿ ನಾಗರೀಕರನ್ನಾಗಿ ಮಾಡಲು ಈ ನೀತಿ ಅನುಸರಿಸಿದೇ ಎನ್ನುವ ಆರ್ಯರಾಜನ ಮಾತುಗಳಲ್ಲಿ ತನ್ನ ಅಧಿಕಾರ, ರಾಜ್ಯ ವಿಸ್ತರಣಾ ದಾಹವನ್ನು ಮರೆಮಾಚಿ, ಸದುದ್ದೇಶದಿಂದ ಇದನ್ನು ಮಾಡಿ ಅಸುರರಿಗೆ ಉಪಕಾರವನ್ನೇ ಮಾಡುತ್ತಿದ್ದೇನೆ ಎನ್ನುವುದು ಆತನ ಮೂರ್ಖತನದ ಮಾತುಗಳು ಎನಿಸುತ್ತದೆ. ಸುರ ಮತ್ತು ಅಸುರರು ದಾಯಾದಿಗಳಾಗಿದ್ದರೂ ಅನಾದಿ ಕಾಲದಿಂದಲೂ ಸಂಪತ್ತಿನ ವಿಚಾರವಾಗಿ ಇವರಿಬ್ಬರಲ್ಲಿ ಘರ್ಷಣೆಗಳು ನಡೆಯುತ್ತಲೇ ಇವೆ. ಸಮುದ್ರ ಮಥನದ ಸಂಧರ್ಭದಲ್ಲಿ ದೊರೆತ ಸಂಪತ್ತೆಲ್ಲವನ್ನೂ ಸುರರು ಅಪಹರಿಸಿ ಕಡೆಗೆ ಅಮೃತ ಪಾನವನ್ನು ನೀಡದೆ ಮೋಸ ಮಾಡಿದುದು ದಾಯಾದಿ ಕಲಹದ ಮೂಲವಾಗಿದೆ.

ದೃಶ್ಯ ಮೂರರಲ್ಲಿ ಬಲಿ ಚಕ್ರವರ್ತಿ ತನ್ನಿಂದ ಸೋತು ಬಂಧಿಗಳಾಗಿರುವ ಸುರರಾಜ ಮುಂತಾದವರ ವಿಚಾರಣೆ ನಡೆಸುವ ದೃಶ್ಯವಿದ್ದು ಸುರ ಮತ್ತು ಅಸುರರ ನಡುವಿನ ಕಲಹಗಳಿಗೆ ಕಾರಣ ಮತ್ತು ಅಸುರರ ಕುರಿತಾದ ಸುರರ ಮತ್ತು ಆರ್ಯ ರಾಜನ ತಪ್ಪು ಕಲ್ಪನೆಗಳು ಈ ಭಾಗದಲ್ಲಿ ಕಂಡುಬರುತ್ತದೆ. ಸುರ ಮತ್ತು ಅಸುರರಲ್ಲಿ ಆಶ್ರಯ ಬೇಡಿ ಬಂದ ಆರ್ಯರು ಕ್ರಮೇಣ ಅಸುರರಲ್ಲಿ ದುರ್ಬಲ ಅರಸರಿದ್ದ ಕಾಲದಲ್ಲಿ ದಮನ ಆಕ್ರಮಣ ವಿಸ್ತರಣಾ ನೀತಿಯನ್ನು ಅನುಸರಿಸಿ ಅವರ ಮಾದರಿ ನಗರಗಳನ್ನು, ಉತ್ತಮ ಸಂಸ್ಕೃತಿಯನ್ನು ನಾಶ ಮಾಡಿದರು. ಮುಂದೆ ಅತಿಥಿಗಳೇ ದಣಿಗಳಾಗಿ ಸಾಮ್ರಾಜ್ಯ ಸ್ಥಾಪಿಸಿಕೊಂಡು ಅವರಿಗೆ ಒಂದು ವರ್ಣವನ್ನು ಸೃಷ್ಟಿಸಿ ಅಸುರರನ್ನು ದಾಸರನ್ನಾಗಿ ಮಾಡಿಕೊಂಡು ಅವರನ್ನು ಕೀಳಾಗಿ ಕಂಡು ಶೋಷಿಸುತ್ತಿದ್ದರು. ಇದರ ಕುರಿತು ಅವರ ಅಭಿಪ್ರಾಯವನ್ನು ಕೇಳಿದರೆ ನೀವು ಅಸುರರು ನೀಚ ಸಂಸ್ಕೃತಿಯವರು  ನಿಮಗೆ ಉತ್ತಮ ಸಂಸ್ಕೃತಿಯನ್ನು ಕಲಿಸುವ ಸಲುವಾಗಿ ನಿಮ್ಮ ಮೇಲೆ ಆಕ್ರಮಣ ಮಾಡುತ್ತಿದ್ದೇವೆ ಎಂದು ಹೇಳುವ ಆರ್ಯ ರಾಜನ ಮಾತುಗಳು ತಾವು ಉತ್ತಮರೆನಿಸಿಕೊಳ್ಳಲು ಮತ್ತೊಬ್ಬರನ್ನು ನೀಚರೆಂದು ತೋರಿಸುವ ಆ ಮೂಲಕ ತಮ್ಮ ಅಧೀನರನ್ನಾಗಿ ಅವರನ್ನು ಮಾಡಿಕೊಳ್ಳುವ ಹುನ್ನಾರದ ಮಾತುಗಳಿವು ಎನಿಸದೇ ಇರಲಾರದು. ಸುರರಾಜನ ವಿಚಾರಣಾ ಸಂದರ್ಭದಲ್ಲಿ  ತಮ್ಮ ದಾಯಾದಿಗಳಾದ ಅಸುರರಿಗೆ ಆಸ್ತಿ ಹಂಚಿಕೆಯಲ್ಲಿ ಮೋಸ ಮಾಡಿದುದು, ಇದಕ್ಕಾಗಿ ಅಸುರರು ಆಕ್ರಮಣ ನಡೆಸಿ ಇವರು ಸೋತು ಪರಾಜಿತರಾದಾಗ ಆ ತ್ರಿಮೂರ್ತಿಗಳ ಮೊರೆ ಹೋಗಿ ನೇರ ಮಾರ್ಗದಿಂದಲ್ಲದ್ದಿದ್ದರೂ ವಾಮ ಮಾರ್ಗದಿಂದಲಾದರೂ ತಮ್ಮ ರಾಜ್ಯವನ್ನು ಸಂಪತ್ತನ್ನು ಮರಳಿ ಪಡೆಯುತ್ತಿದ್ದರು. ಉತ್ತಮ ನಗರಗಳನ್ನು ಸುರರು ತೆಗೆದುಕೊಂಡು, ಫಲವತ್ತಾಗಿಲ್ಲದ ವಾಸಿಸಲು ಯೋಗ್ಯವಲ್ಲದ ಪ್ರದೇಶಗಳನ್ನು ಅಸುರರಿಗೆ ನೀಡಿ ನೀವು ಬಲಿಷ್ಠರಾಗಿದ್ದೀರಿ ಅದನ್ನು ನೀವು ಫಲವತ್ತಾಗಿ ಮಾಡಿಕೊಳ್ಳಿ ಎನ್ನುವ ಸುರರಾಜನ ಮಾತುಗಳಲ್ಲಿ ಸುರರ ಮೈಗಳ್ಳತನ ಹಾಗೂ ಅಸುರರು ಶ್ರಮಜೀವಿಗಳು

ಎಂಬ ಎರಡು ಅಂಶಗಳು ತಿಳಿದುಬರುತ್ತದೆ. ಅಲ್ಲದೇ ಇದಕ್ಕೆ ಪ್ರತಿಯಾಗಿ ಬಲಿರಾಜ " ನಾವು ದಾಸರಾಗಿ ಆರ್ಯರಿಗಾಗಿ ದುಡಿಯಬೇಕಾದ ವರ್ಗ; ಈ ಆರ್ಯರು ನಿಮ್ಮ ದೇವತ್ವವನ್ನು ನಂಬಿ ಪೂಜಿಸುತ್ತಾ ನಿಮಗಾಗಿ ದುಡಿಯುವ, ದುಡಿಯಬೇಕಾದ ವರ್ಗ; ನೀವು ದುಡಿಯದೆಯೇ ಸುಖವನ್ನು ಅನುಭವಿಸಬೇಕಾದ ಅರ್ಹವರ್ಗ"[5] ಎಂಬ ಮಾತುಗಳಲ್ಲಿ ವರ್ಗ ಸಂಘರ್ಷದ ನೆಲೆಯನ್ನು ಗುರುತಿಸಬಹುದಾಗಿದೆ. ತಾವು ಅನುಭವಿಸುತ್ತಿರುವ ಸ್ವರ್ಗ ಸುಖ ಜೀವನ ಹಿಂದಿನ ಕಾಲದಲ್ಲಿ ಮಾಡಿದ ಪುಣ್ಯಕಾರ್ಯಕ್ಕೆ ಪಡೆದ ಫಲ ಎನ್ನುವ ಸುರರಾಜನ ಮಾತಿಗೆ ಈಗ ನೀವು ಅನುಭವಿಸುತ್ತಿರುವ ಈ ಬಂಧನ ರೋದನವೂ ನಿಮ್ಮ ಕರ್ಮದ ಫಲವೇ ಎಂದು ಬಲಿರಾಜ ಅಣಕವಾಡುತ್ತಾನೆ.

ಎಲ್ಲರ ವಿಚಾರಣೆಗಳು ಮುಗಿದು ಇನ್ನೇನು ನ್ಯಾಯ ತೀರ್ಮಾನವನ್ನು ಹೇಳಬೇಕು ಎನ್ನುವಷ್ಟರಲ್ಲಿ ವಟು ವೇಷಧಾರಿಯಾದ ವಾಮನನ ಆಗಮನವಾಗುತ್ತದೆ. ಅವನಿಗೆ ಮೂರು ಹೆಜ್ಜೆ ಇಡುವಷ್ಟು ಭೂಮಿ ದಾನ ನೀಡಿದ ನಂತರ ವಾಮನ ವೇಷಧಾರಿಯಾದ ಶ್ರೀ ಮಹಾವಿಷ್ಣುವು ತ್ರಿವಿಕ್ರಮನಾಗಿ ಹೆಜ್ಜೆಯಿಡುತ್ತಾ ಮೂರನೇ ಹೆಜ್ಜೆಯನ್ನು ಬಲಿಯ ತಲೆಯ ಮೇಲಿಟ್ಟು ತುಳಿದು ತುಳಿದು ಆತನನ್ನು ಪಾತಾಳಕ್ಕೆ ತಳ್ಳಲಾರದೆ ಪರಾಜಿತನಾಗಿ ಸೋಲನ್ನೊಪ್ಪಿಕೊಳ್ಳುತ್ತಾನೆ. "... ನೀನು ನಿನ್ನ ಹಿಂದಿನ ಕೆಲವು ಅಸುರ ರಾಜರಂತೆಯೇ ಎಂದು ತಿಳಿದು ದುಡುಕಿದೆನು. ಸಹಜವಾಗಿಯೇ ಸೋಲಾಯಿತು. ಚಿಂತೆಯಿಲ್ಲ, ವಿಷಾದವಿಲ್ಲ. ನಿನ್ನಂಥವನೊಬ್ಬನನ್ನು ಕಂಡೆನಲ್ಲ, ಯಾವ ವಿಧದಲ್ಲಾದರೂ ಸ್ಪರ್ಶಿಸಿದೆನಲ್ಲ, ಜಯ ನಿನ್ನದಾಯಿತಲ್ಲ ಎಂದು ಸಂತೋಷಿಸುತ್ತೇನೆ. ನಿನಗೆ ಅಭಿನಂದನೆಗಳು! ನಾನು ತೃಪ್ತನಾದೆ. ನಿನ್ನ ಮುಂದೆ ನಾನು ವಾಮನನೇ ಹೊರತು ತ್ರಿವಿಕ್ರಮನಾಗಲಾರೆನೆಂದು ಸ್ಪಷ್ಟವಾಯಿತು. ನಿಜವಾದ ತ್ರಿವಿಕ್ರಮ ನೀನೇ"[6] ಎಂದು ವೈಕುಂಠರಾಜ ಬಲಿರಾಜನಿಗೆ ಶರಣಾಗುತ್ತಾನೆ. ಮುಂದೆ ಬಲಿ ಚಕ್ರವರ್ತಿ ಶ್ರೀ ಮಹಾವಿಷ್ಣುವನ್ನೇ ಆತನ ಹಿಂದಿನ ಅಪರಾಧಗಳನ್ನೆಲ್ಲಾ ಜ್ಞಾಪಿಸಿ ಆತನ ತಪ್ಪಿಗೆ ಶಿಕ್ಷೆಯಾಗಿ ತನ್ನ ಸಾಮ್ರಾಜ್ಯದ ದ್ವಾರಪಾಲಕನಾಗುವಂತೆ ಆಜ್ಞಾಪಿಸುತ್ತಾನೆ. ಶ್ರೀಹರಿಯು ಅದನ್ನು ಸಂತೋಷದಿಂದಲೇ ಒಪ್ಪಿಕೊಳ್ಳುತ್ತಾನೆ. ಇಲ್ಲಿ ಧರ್ಮ, ಸತ್ಯ, ನ್ಯಾಯಗಳಿಗೆ ಜಯವಾಗುತ್ತದೆ. ಅಲ್ಲದೇ ತಮ್ಮ ತಪ್ಪನ್ನು ಅರಿತ ಸುರರಾಜಾದಿಗಳು ತನ್ನ ದಾಯಾದಿಗಳಡನೆ ಇನ್ನು ಮುಂದೆ ಸೌಹಾರ್ದಯುತ ಜೀವನ ನಡೆಸುವ ತೀರ್ಮಾನಕ್ಕೆ ಬರುತ್ತಾರೆ ಎನ್ನುವುದರೊಂದಿಗೆ ನಾಟಕದ ಕಥೆಯ ಸುಖಾಂತ್ಯವಾಗುತ್ತದೆ.

ಅಶ್ವತ್ಥರು ಈ ನಾಟಕದ ಮೂಲಕ 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಮಾತಿನಂತೆ ಧರ್ಮ ಮಾರ್ಗದಲ್ಲಿ ನಡೆಯುತ್ತಿದ್ದ ಬಲಿರಾಜನನ್ನು ಶ್ರೀ ಮಹಾವಿಷ್ಣುವಿನ ತುಳಿತವೂ ಸೋಲಿಸಲಾಗಲಿಲ್ಲ ಎಂಬುದನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಅಲ್ಲದೇ "ರಾಜತನವೆನ್ನುವುದು, ರಾಜನೆನಿಸಿಕೊಂಡವನು ಸ್ವಂತ ಸುಖ ಯೋಚನೆಯನ್ನು ತ್ಯಜಿಸಿ ಪ್ರಜಾಹಿತಕ್ಕಾಗಿ ಏಳ್ಗೆಗಾಗಿ ಸಾರ್ವದಾ ಮಾಡುವ ಕಠಿಣ ತಪಸ್ಸು, ಆತ್ಮ ಸಮರ್ಪಣ, ಬಲಿದಾನವೂ, ಪ್ರತಿಪ್ರಜೆಯೂ ದುಡಿಮೆಯಲ್ಲಿ ಫಲಾನುಭವದಲ್ಲಿ, ಹಕ್ಕು ಬಾಧ್ಯತೆಗಳಲ್ಲಿ,

ಸಮುದಾಯ ಕ್ಷೇಮದಲ್ಲಿ, ತಾನು ಸುಮಾರಾಗಿಯಾದರೂ ಸಮ ಸಮ ಪಾಲುದಾರ ಎಂದು ಭಾವಿಸುವಂತಿರಬೇಕು. ಅದೇ ಸದಾಡಳಿತದ ಗುರಿ, ದಾರಿ, ಚಿಹ್ನೆಯೂ ಕೂಡ ಎಂದು ನನ್ನ ಭಾವನೆ"[7] ಎಂದು ಬಲಿರಾಜನ ಮಾತುಗಳ ಮೂಲಕ ಅಶತ್ಥರು ತಮ್ಮ ಕಲ್ಪನೆಯ ಪ್ರಜಾ ರಾಜ್ಯ ಹಾಗೂ ರಾಜನ ಕುರಿತು ತಿಳಿಸಿದಂತಿದೆ.

"ಪುರಾಣಸಾಹಿತ್ಯ ಪ್ರಾಚೀನವಾದುದಾದರೂ ಅದರಲ್ಲಿ ಬರುವ ಘಟನೆಗಳು, ಪಾತ್ರಗಳು, ಪರಿಸರಗಳು ಇಂದಿನವರೆಗೂ ಸಾಹಿತಿಗಳಿಗೆ ಪ್ರೇರಕ ಆಗಿರುವುದನ್ನು ಕಾಣುತ್ತಿದ್ದೇವೆ. ಅಂದಿನ ಪಾತ್ರಗಳನ್ನು ಆಧಾರವಾಗಿ ತೆಗೆದುಕೊಂಡರೂ ಅವುಗಳಲ್ಲಿ ಕವಿ ತನ್ನದೇ ಆದ ರೀತಿಯಲ್ಲಿ ಮಾನವೀಯತೆ, ಮಾನ ಅಭಿಮಾನಗಳನ್ನು, ಸಾಹಸ ದುಸ್ಸಾಹಸಗಳನ್ನೂ ವೈಭವೀಕರಿಸಿ ಹೊಸ ಸೃಷ್ಟಿಗಳಂತೆ ನಿರ್ಮಿಸಿರುವ ವಿಧಿ ವಿಧಾನಗಳು ಅಚ್ಚರಿಗೊಳಿಸುತ್ತವೆ"[8] ಎಂಬ ಗೋಪಾಲಕೃಷ್ಣಯ್ಯನವರ ಮಾತಿನಂತೆ ಅಶ್ವತ್ಥರು ಬಲಿ ಚಕ್ರವರ್ತಿಯನ್ನು ದಾನವ ರಾಜನಾಗಿ ಅಷ್ಟೇ ಅಲ್ಲದೇ ಧರ್ಮ ನ್ಯಾಯಗಳ ಪ್ರತಿಮೆಯಾಗಿ ಚಿತ್ರಿಸಿದ್ದಾರೆ. ಈ ನಾಟಕವೂ ಧರ್ಮವೆಂಬುದು ಎಲ್ಲರಿಗಿಂತ, ಎಲ್ಲಕ್ಕಿಂತ ದೊಡ್ಡದು ಎಂಬುದನ್ನು ಮನದಟ್ಟು ಮಾಡುತ್ತದೆ. ನ್ಯಾಯ ಮಾರ್ಗದಲ್ಲಿ ನಡೆದುಕೊಂಡು ನಮ್ಮನ್ನು ನಾವು ಶೋಧಿಸಿಕೊಂಡು ಕಂಡ ಲೋಪ ದೋಷಗಳನ್ನು ತಿದ್ದಿಕೊಂಡು ನಮ್ಮ ಯೋಗ್ಯತೆಯನ್ನು ಬೆಳೆಸಿಕೊಳ್ಳುವ ಮಾರ್ಗ ಅನುಸರಿಸಬೇಕು. ಆಗ ನಮಗೆ ಇನ್ನು ಯಾರ ಸಹಾಯವೂ ಬೇಕಾಗುವುದಿಲ್ಲ. ನಮ್ಮ ಮೇಲಿನ ಅಚಲ ನಂಬಿಕೆಯಿಂದ ಯಾವ ಯಾರ ಭಯವೂ ಇಲ್ಲದೇ ಇರಬಹುದು ಎಂಬುದನ್ನು ಈ ನಾಟಕವು ಧ್ವನಿಸುತ್ತದೆ.

**ಕೊನೆ ಟಿಪ್ಪಣಿ**

1. ಗೋಪಾಲಕೃಷ್ಣಯ್ಯ ಕೆ.ಎಲ್, ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ, ಮುಖಲೇಖನ
2. ಅಶ್ವತ್ಥ, ಅಶ್ವತ್ಥರ ನಾಟಕಗಳು, ಪು.ಸಂ 1003
3. ಅಶ್ವತ್ಥ, ಅಶ್ವತ್ಥರ ನಾಟಕಗಳು, ಪು.ಸಂ 1005
4. ಅಶ್ವತ್ಥ, ಅಶ್ವತ್ಥರ ನಾಟಕಗಳು, ಪು.ಸಂ 1008
5. ಅಶ್ವತ್ಥ, ಅಶ್ವತ್ಥರ ನಾಟಕಗಳು, ಪು.ಸಂ 1030
6. ಅಶ್ವತ್ಥ, ಅಶ್ವತ್ಥರ ನಾಟಕಗಳು, ಪು.ಸಂ 1050
7. ಅಶ್ವತ್ಥ, ಅಶ್ವತ್ಥರ ನಾಟಕಗಳು, ಪು.ಸಂ 1061
8. ಗೋಪಾಲಕೃಷ್ಣಯ್ಯ ಕೆ.ಎಲ್, ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ, ಮುನ್ನುಡಿಯಿಂದ

**ಆಕರ ಗ್ರಂಥ**

1. ಅಶ್ವತ್ಥ : ಅಶ್ವತ್ಥರ ನಾಟಕಗಳು, ರವಿ ಪಬ್ಲಿಕೇಷನ್ಸ್,ವಿದ್ಯಾರಣ್ಯಪುರಂ,ಮೈಸೂರು,1991

**ಪರಾಮರ್ಶನ ಗ್ರಂಥಗಳು**

1. ಸುಜಾತಾ,ಎಚ್,ಎಸ್ – ಅಶ್ವತ್ಥರ ಬದುಕು ಒಂದು ನೋಟ,ಸುಹಾಸ ಪ್ರಕಟಣೆಗಳು, ಕುವೆಂಪು ನಗರ ಮೈಸೂರು–2007
2. ರಾವ್,ಆರ್,ಎನ್ –ನಮ್ಮ ಪುರಾಣ ಪಾತ್ರಗಳು,ಅದ್ವೈತ್ ಆರ್ಯ ಪ್ರಕಾಶನ ಬೆಂಗಳೂರು,2011
3. ಶಾಮರಾಯ ತ ಸು– ಕನ್ನಡ ನಾಟಕ, ಪ್ರತಿಭಾ ಪ್ರಕಾಶನ, ಗೋಕುಲಂ ಮೈಸೂರು,2020
4. ಮರುಳಸಿದ್ಧಪ್ಪ,ಕೆ–ಆಧುನಿಕ ಕನ್ನಡ ನಾಟಕ,ಅಂಕಿತ ಪುಸ್ತಕ ಪ್ರಕಾಶನ,ಬಸವನಗುಡಿ ಬೆಂಗಳೂರು,2013.